# ಮಾನವೀಯ ಲೋಕದ ಹೊಸ ಅಧ್ಯಾಯ



**‘ರಾಮಾ ರಾಮಾ ರೇ’ ಖ್ಯಾತಿಯ ಸತ್ಯಪ್ರಕಾಶ್ ನಿರ್ದೇಶನದ ಹೊಸ ಸಿನಿಮಾ ‘ಒಂದಲ್ಲಾ ಎರಡಲ್ಲಾ’ ತೆರೆ ಕಾಣಲು ಸಿದ್ಧತೆ ನಡೆಸಿದೆ. ವಿಭಿನ್ನ ಚಿತ್ರಗಳನ್ನು ಹಂಬಲಿಸುವ ಪ್ರೇಕ್ಷಕರಿಗೆ ಈ ಚಿತ್ರ ರಸಕವಳವಾಗುವ ನಿರೀಕ್ಷೆಯಿದೆ.**

■ **ರಘು**

‘ಕೊಲ್ಲುವುದೇ ಬೇಡಯ್ಯಾ ನನಗಿರಲಿ ಅಪಜಯ’ ಎನ್ನುವ ತಾತ್ವಿಕತೆಯನ್ನು ‘ರಾಮಾ ರಾಮಾ ರೇ’ ಚಿತ್ರದಲ್ಲಿ ಪ್ರತಿಪಾದಿಸಿದ್ದ ನಿರ್ದೇಶಕ ಸತ್ಯಪ್ರಕಾಶ್, ಈಗ ಮತ್ತೊಂದು ಚಿತ್ರದ ಮೂಲಕ ಜೀವನದ ಸೋಲು–ಗೆಲುವಿನ ಅರ್ಥ ಶೋಧಿಸಲು ಹೊರಟಿದ್ದಾರೆ.

‘ಒಂದಲ್ಲಾ ಎರಡಲ್ಲಾ’ ಸತ್ಯಪ್ರಕಾಶ್ ನಿರ್ದೇಶನದ ತೆರೆಗೆ ಸಿದ್ಧವಾಗಿರುವ ಸಿನಿಮಾ. ಚಿತ್ರದ ಶೀರ್ಷಿಕೆಯೇ ಕಥೆಯ ಅಪಾರ ಸಾಧ್ಯತೆಗಳನ್ನು ಸೂಚಿಸುವುದರ ಜೊತೆಗೆ ಜೀವನದ ಸಂಕೀರ್ಣತೆಯನ್ನೂ ಸೂಚಿಸುವಂತಿದೆ. ‘ರಾಮಾ ರಾಮಾ ರೇ’ ಚಿತ್ರದಂತೆ ಈ ಚಿತ್ರದಲ್ಲೂ ಒಂದು ಪಯಣವಿದೆ. ಜರ್ನಿಯ ಕಥೆ ಎಂದಾಕ್ಷಣ ಅದು ಪ್ರೇಮಿಗಳ ಪಯಣದ ಕಥೆಯಾಗಿರುವುದು ಸಾಮಾನ್ಯ. ಆದರೆ, ಈ ಚಿತ್ರದ ಪಯಣ ಓರ್ವ ಬಾಲಕನಿಗೆ ಸಂಬಂಧಿಸಿದ್ದು. ಎಲ್ಲರ ಅಂತರಂಗದಲ್ಲೂ ಒಂದು ಮಗುವಿರುತ್ತದೆ ಎನ್ನುವ ಜನಪ್ರಿಯ ಮಾತಿದೆಯಷ್ಟೇ. ಈ ಮಾತಿನ ಅರ್ಥ ಹುಡುಕುವಂತೆ ಸಮೀರ ಎನ್ನುವ ಹುಡುಗ ಊರು ಸುತ್ತುತ್ತಾನೆ. ಹೀಗೆ, ಬಾಲಕನೊಬ್ಬನ ಅಲೆದಾಟದ ಮೂಲಕ ಕಥೆಯನ್ನು ಕಟ್ಟಿಕೊಡಲು ಪ್ರಯತ್ನಿಸಿರುವುದು ‘ಒಂದಲ್ಲಾ ಎರಡಲ್ಲಾ’ ಚಿತ್ರದ ವಿಶೇಷ.

ಮಗುವಿನ ಮುಗ್ಧತೆಯ ಕಣ್ಣಲ್ಲಿ ಸಮಾಜವನ್ನು ನೋಡುವ ಪ್ರಯತ್ನ ಸತ್ಯಪ್ರಕಾಶ್ ಅವರದು. ಬಾಲಕನೊಬ್ಬನ ಪಯಣದಲ್ಲಿ ಕೆಡುಕುಗಳು ಎದುರಾದರೂ, ಅದನ್ನು ಮರೆಸುವಂತೆ ಮಾನವೀಯತೆಯ ಲೋಕ ಅನಾವರಣಗೊಳ್ಳುತ್ತಾ ಹೋಗುತ್ತದಂತೆ. ವರ್ತಮಾನದ ಅನೇಕ ಸಂಗತಿಗಳು ಸಿನಿಮಾದಲ್ಲಿ ಸೂಚ್ಯವಾಗಿ ಬಂದರೂ, ಅಂತಿಮವಾಗಿ ಮಾನವೀಯ ಸಂಬಂಧಗಳ ಮಹತ್ವವನ್ನು ಸಿನಿಮಾ ಪ್ರತಿಪಾದಿಸುತ್ತದೆ.

ಗಂಭೀರವಾದ ಸಂಗತಿಯನ್ನೂ ಲಘುಹಾಸ್ಯದ ಲೇಪದೊಂದಿಗೆ ಹೇಳುವ ಸತ್ಯಪ್ರಕಾಶ್‌ರ ಕಲೆಗಾರಿಕೆ ಮೊದಲ ಚಿತ್ರದಲ್ಲೇ ಪರಿಣಾಮಕಾರಿಯಾಗಿ ಅನಾವರಣಗೊಂಡಿತ್ತು. ವಿಷಾದದಲ್ಲೂ ನಗುವನ್ನು ತುಳುಕಿಸಬಲ್ಲ ಪ್ರಯತ್ನ ಈ ಚಿತ್ರದಲ್ಲೂ ಇದೆ. ಜೊತೆಗೆ, ಗೀತೆಗಳ ಮೂಲಕವೂ ಕಥೆಯ ಆಶಯಗಳನ್ನು ವಿಸ್ತರಿಸುವ ಪ್ರಯತ್ನವೂ ನಡೆದಿದೆ. ಗೀತೆಗಳ ಸಾಹಿತ್ಯವೂ ಸತ್ಯಪ್ರಕಾಶ್ ಅವರದೇ.

ರೋಹಿತ್ ಎನ್ನುವ ಪಾಂಡವಪುರದ ಬಾಲಕ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾನೆ. ಈ ಪಾತ್ರಕ್ಕಾಗಿ ಸಾವಿರಾರು ಹುಡುಗರನ್ನು ಸೋಸಿದ ನಂತರ ರೋಹಿತ್‌ನನ್ನು ನಿರ್ದೇಶಕರು ಆರಿಸಿದ್ದಾರೆ. ಚೂಟಿಯಾದ ಈ ಬಾಲಕ ಚಿತ್ರವನ್ನು ತನ್ನ ಅಮಾಯಕತೆಯಿಂದ ಆವರಿಸಿಕೊಂಡಿದ್ದಾನಂತೆ. ಎಂ.ಕೆ. ಮಠ, ಸಾಯಿಕೃಷ್ಣ, ನಾಗಭೂಷಣ್ ತಾರಾಗಣದಲ್ಲಿರುವ ಪ್ರಮುಖರು. ರಂಗಭೂಮಿಯ ಪ್ರತಿಭಾವಂತರು ಕೂಡ ಕಲಾವಿದರ ಬಳಗದಲ್ಲಿದ್ದಾರೆ.

‘ಹೆಬ್ಬುಲಿ’ ಚಿತ್ರವನ್ನು ನಿರ್ಮಿಸಿದ್ದ ಉಮಾಪತಿ ಅವರು ‘ಒಂದಲ್ಲಾ ಎರಡಲ್ಲಾ’ ಚಿತ್ರದ ನಿರ್ಮಾಪಕರು. ತಾರಾ ವರ್ಚಸ್ಸಿನ ನಟರ ಸಿನಿಮಾದ ನಿರ್ಮಾಪಕರು, ಕಥೆಯನ್ನೇ ನೆಚ್ಚಿದ ಯುವ ಪ್ರತಿಭಾವಂತರ ಸಿನಿಮಾವನ್ನು ನಿರ್ಮಿಸಿರುವುದು ಕನ್ನಡ ಚಿತ್ರರಂಗದ ಪಾಲಿಗೆ ಅಪರೂಪದ ವಿದ್ಯಮಾನ. ದುಡ್ಡಿನ ಜೊತೆಗೆ ಆತ್ಮತೃಪ್ತಿ ಹಾಗೂ ಹೆಸರು ಕೂಡ ಮುಖ್ಯ ಎನ್ನುವ ನಂಬಿಕೆಯಿಂದ ಉಮಾಪತಿ ಹೊಸ ಬಗೆಯ ಸಿನಿಮಾದ ಬೆಂಬಲಕ್ಕೆ ನಿಂತಿದ್ದಾರೆ.

‘ರಾಮಾ ರಾಮಾ ರೇ’ ಸಿನಿಮಾದ ಧನಾತ್ಮಕ ಅಂಶಗಳಲ್ಲಿ ವಾಸುಕಿ ವೈಭವ್ ಸಂಗೀತ ಹಾಗೂ ಲವಿತ್ ಛಾಯಾಗ್ರಹಣ ಮುಖ್ಯವಾಗಿದ್ದವು. ಈ ಮಿತ್ರಮಂಡಲಿ ‘ಒಂದಲ್ಲಾ ಎರಡಲ್ಲಾ’ ಚಿತ್ರದಲ್ಲೂ ಮುಂದುವರೆದಿದೆ. ■

